Sriyuths

8. S. Puttaswamy,
9. Mahendra Kumar,
10. Smt. Addy Saldhana,
11. A. Sharanappa,
12. B. V. Kakkilaya,
13. Konandur Lingappa,
14. N. S. Gurusiddappa,

and 15. P. B. Patil."

The motion was adopted.

Mr. DEPUTY SPEAKER.—The Bill, stand referred to the Joint Select Committee.

DISCUSSION FOR SHORT DURATION UNDER RULE 59

re : **Affiairs of the Lok Shikhana Trust**

Sri H. D. DEVE GOWDA.—Sir, I raise a discussion on the affairs of the Lok Shikshana Trust.

Mr. DEPUTY SPEAKER.—Yes.

† ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮುಂದೆ ಲೋಕ ಶಿಕ್ಷಣ ಟ್ರಸ್ಟ್ ಬಗ್ಗೆ ಚರ್ಚೆಮಾಡಬೇಕೆಂದು ತಮ್ಮ ಪರವಾನೆ ಕೇಳಿದ್ದೇನೆ. ಈ ಒಂದು ಸಂದರ್ಭದಲ್ಲಿ ಹೇಳುವುದಾದರೆ, ಕೆಲವು ಐತಿಹಾಸಿಕ ಹಿನ್ನೆಲೆ ಈ ಟ್ರಸ್ಟ್‌ಗೆ ಸಂಬಂಧಪಟ್ಟ ಹಾಗೆ ಇದೆ, ಅದನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ತಮಗೆ ಗೊತ್ತಿದ್ದ ಹಾಗೆ 1935 ರಲ್ಲಿ ಪ್ರಾರಂಭವಾದ ಈ ಸಂಸ್ಥೆ ಬಹುಶಃ 1935 ಕ್ಕಿಂತ ಮೊದಲು ಬೆಳಗಾಂನಲ್ಲಿ ಇದು ಒಂದು ಚಿಕ್ಕ ಸಂಸ್ಥೆಯಾಗಿ ಕೆಲಸ ಮಾಡಿತು. ನ್ಯಾಷನಲ್ ಲಿಬ್ರೇಚರ್ ಪಬ್ಲಿಕೇಷನ್ ಟ್ರಸ್ಟ್ ಎಂಬ ನಾಮಾಂಕಿತದಿಂದ ಹೆಸರು ಪಡೆದಂಥ ಈ ಒಂದು ಸಂಸ್ಥೆ ಈಪ್ರೊತ್ತು ರಾಜ್ಯದಲ್ಲಿ ಸವಿಸ್ತಾರವಾಗಿ ಬೆಳೆದಿದೆ. ಹಲವಾರು ರಂಗಗಳಲ್ಲಿ ಬೆಳೆದಿದೆ. 1947 ರಲ್ಲಿ ನ್ಯಾಷನಲ್ ಲಿಬ್ರೇಚರ್ ಪಬ್ಲಿಕೇಷನ್ ಟ್ರಸ್ಟ್ ಎನ್ನುವುದು ಲೋಕ ಶಿಕ್ಷಣ ಟ್ರಸ್ಟ್ ಎಂಬುದಾಗಿ ಹೆಸರನ್ನು ಮಾರ್ಪಾಡು ಮಾಡಿಕೊಂಡಿದ ಎಂದು ನಾನು ಕೇಳಿದ್ದೇನೆ. ಈ ಸಂಸ್ಥೆ ಒಂದು ಸಾರ್ವಜನಿಕ ಸಂಸ್ಥೆ. ಹಲವಾರು ಜನರ ಶ್ರಮದ ಫಲದಿಂದ ಕಟ್ಟಿರತಕ್ಕಂಥ ಸಂಸ್ಥೆ ಮತ್ತು ಹಲವಾರು ಕಾರ್ಮಿಕರ ದುಡಿಮೆಯ ಫಲದಿಂದ ಕಟ್ಟಿರತಕ್ಕಂಥ ಸಂಸ್ಥೆ. ಹಾರ್ಡಿಕರ್, ಹುಕ್ಕೇರಿಕರ್, ಗಂಗಾಧರರಾವ್ ದೇಶಪಾಂಡೆ ಮತ್ತು ಇನ್ನೂ ಅನೇಕ ಜನ ರಾಷ್ಟ್ರದ ಮುಂದಾಳುಗಳು ಈ ಸಂಸ್ಥೆಯನ್ನು ಕಟ್ಟಲಿಕ್ಕೆ ಶ್ರಮಿಸಿದ್ದಾರೆ. ಈ ಸಂಸ್ಥೆ 1935 ರಲ್ಲಿ ಕೇವಲ 4-6 ಸಾವಿರ ರೂಪಾಯಿ ಬಂಡವಾಳದ ಆ ಸ್ಥಿತಿಯನ್ನು ಹೊಂದಿತ್ತು. ಈ ಸಂಸ್ಥೆಯಲ್ಲಿ ಕೆಲಸ ಮಾಡಿದಂಥ ಅನೇಕರು ಸಂಭಾವನೆ ಇಲ್ಲದೇ ದುಡಿದಿದ್ದಾರೆ. ಅವರು ದುಡಿದಿರತಕ್ಕಂಥಾದ್ದರಲ್ಲಿ ಕೆಲವು ಭಾಗಗಳನ್ನು ಈ ಸಂಸ್ಥೆಗೆ ಕೊಟ್ಟಿದ್ದಾರೆ. ಇಂತಹ ಹಲವಾರು ನಿದರ್ಶನಗಳನ್ನು ಕೊಡಬಹುದು. ಇದರಲ್ಲಿ ಕೆಲವು ಹೆಸರುಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ, ಹಾಗೆ ಪ್ರಸ್ತಾಪ ಮಾಡದೇ ಹೋದರೆ ಬಹುಶಃ ನನ್ನ ಉದ್ದೇಶ ಇದರಿಂದ ನಿವಾರಣೆಯಾಗುವುದಿಲ್ಲ. ದಿವಂಗತ ಶ್ರೀಮಾನ್ ಹನುಮಂತರಾವ್ ಮೊಹರೆ ಅವರು 1957 ರವರೆಗೂ ಈ ಸಂಸ್ಥೆಯ ಬೆಳವಣಿಗೆಗೆ ಎಲ್ಲಾ ರೀತಿಯ ಶ್ರಮ ವಹಿಸಿದ್ದಾರೆ, ಅಲ್ಲದೆ ಅವರು ಈ ಸಂಸ್ಥೆಗೆ ಬಹಳ ದುಡಿದಿದ್ದಾರೆ. 1957 ರಲ್ಲಿ ಈ ಸಂಸ್ಥೆಗೆ ಗ್ರಹಣ ಹಿಡಿಯಿತು ಎಂದು ಹೇಳಿದರೆ ತಪ್ಪಾಗುವುದಿಲ್ಲ. 1957 ರಲ್ಲಿ ಈ ಸಂಸ್ಥೆಗೆ ಗ್ರಹಣ

(ಶ್ರೀ ಎಚ್. ಡಿ. ದೇವೇಗೌಡ)

ಹಿಡಿಯಿತು ಎಂದು ಹೇಳುವುದಕ್ಕೆ ಕಾರಣ ಇದೆ. ಈ ಬಗ್ಗೆ ನಾನು ಕೆಲವು ಹೆಸರನ್ನು ಹೇಳಬೇಕಾಗುತ್ತದೆ. ಅದಕ್ಕಾಗಿ ನಾನು ಅಧ್ಯಕ್ಷರ ಅನುಮತಿಯನ್ನು ಕೇಳುತ್ತೇನೆ. ಏತಕ್ಕಾಗಿ ಅವರ ಹೆಸರು ಹೇಳಬೇಕು ಎಂದರೆ ಈ ಒಂದು ಸಾರ್ವಜನಿಕ ಸಂಸ್ಥೆ ಇಂತಹ ಒಂದು ದುಃಸ್ಥಿತಿಗೆ ಬರುವುದಕ್ಕೆ ಕಾರಣಕರ್ತರು ಯಾರು ಮತ್ತು ಈಪ್ರೊತ್ಸಿನ ದಿವಸ ಈ ಸಂಸ್ಥೆಯ ಒಂದು ಉದ್ದೇಶಕ್ಕೆ ತಿಲಾಂಜಲಿಯನ್ನು ಯಾರು ಅರ್ಪಿಸಿದ್ದಾರೆ, ಇದಕ್ಕೆ ಹೊಣೆಗಾರರು ಯಾರು ಎಂಬುದನ್ನು ಪ್ರಸ್ತಾಪ ಮಾಡುವಾಗ ಕೆಲವು ಹೆಸರುಗಳನ್ನು ಹೇಳಬೇಕಾಗುತ್ತದೆ. ನನಗೆ ಯಾರಮೇಲೂ ವೈಯಕ್ತಿಕವಾಗಿ ದ್ವೇಷ ಇಲ್ಲ, ಅಥವಾ ಯಾವುದೇ ರಾಜಕೀಯ ಹಿನ್ನೆಲೆಯಿಂದ ಈ ಹೆಸರುಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಶ್ರೀಮಾನ್ ಆರ್. ಆರ್. ದಿವಾಕರ್‌ರವರು ರಾಷ್ಟ್ರದ ಮಾಖಂಡರ ಶ್ರೇಣಿಯಲ್ಲಿ ಒಬ್ಬರು, ಅವರು ರಾಜ್ಯಪಾಲರಾಗಿ ಕೆಲಸ ಮಾಡಿದ್ದಾರೆ. ಅವರು ಸ್ವಾತಂತ್ರ್ಯ ಸಂಗ್ರಾಮದ ಯೋಧರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 1957ರ ಪೂರ್ವದಲ್ಲಿ ಅವರು ಬಿಹಾರಿನ ಗೌರ್ನರ್ ಆಗಿ ಕೆಲಸ ಮಾಡಿದ್ದಾರೆ. 1935 ರಿಂದ 1957 ರವರೆಗೂ ಅವರು ಹೊರಗಡೆ ಕೆಲಸ ಮಾಡುತ್ತಾ ಇದ್ದಂಥ ಕಾಲದಲ್ಲೂ ಕೂಡ ಈ ಒಂದು ಸಂಸ್ಥೆ ಸೋಲಿಟ್ ಟ್ರಸ್ಟೀ ಎನ್ನತಕ್ಕಂಥ ಒಂದು ಸ್ಥಾನವನ್ನು ಅವರು ಹಿಡಿದಿಟ್ಟುಕೊಂಡಿದ್ದರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದು ಕೇವಲ ಒಂದು ಸಾಂಕೇತಿಕವಾಗಿರಲಿ ಅಥವಾ ಯಾವುದೇ ಆಗಿರಲಿ, ಈ ಸಂಸ್ಥೆಯಲ್ಲಿ ದಿವಂಗತ ಹನುಮಂತರಾವ್ ಮೊಹರೆಯವರು ಅಬ್ಸೆಂಟೀ ಲ್ಯಾಂಡ್‌ಲಾರ್ಡ್ ಇದ್ದಹಾಗೆ 30 ವರ್ಷಗಳ ಕಾಲ ಅವರ ಜೀವನವನ್ನು ಈ ಸಂಸ್ಥೆಗೆ ಧಾರೆ ಎರೆದಿದ್ದಾರೆ. ಅಲ್ಲದೆ ಶ್ರೀಮಾನ್ ಆರ್. ಆರ್. ದಿವಾಕರ್‌ರವರು ರಾಜಕೀಯ ರಂಗದಲ್ಲಿ ಕೆಲಸ ಮಾಡಿದಂಥಾ ಕಾಲದಲ್ಲೂ ಕೂಡ ಅವರು ಈ ಒಂದು ಸಂಸ್ಥೆಯಲ್ಲಿ ಸಂಭಾವನೆಗಳನ್ನು ಪಡೆಯುತ್ತಿದ್ದರು ಎಂದು ನಾನು ಕೇಳಿದ್ದೇನೆ. ಆದುದರಿಂದ ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು, ಸರ್ಕಾರದ ಉತ್ತರವನ್ನು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ.

1-00 P.M.

ಶ್ರೀಮಾನ್ ಆರ್. ಆರ್. ದಿವಾಕರ್‌ರವರು 1957 ರಲ್ಲಿ ವಾಪಸ್ಸು ಬಂದು ಇದರ ಕಾರ್ಯ ವ್ಯಾಪ್ತಿಯಲ್ಲಿ ಕೈ ಹಾಕಿದ ಮೇಲೆ ಅವರ ಮಗನಾದ ಎ. ಆರ್. ದಿವಾಕರ್‌ರವರನ್ನು ಮ್ಯಾನೇಜರ್ ಆಗಿ ನೇಮಕ ಮಾಡಿದರು. ಆಗ ಶ್ರೀಮಾನ್ ಹನುಮಂತರಾವ್ ಮೊಹರೆಯವರ 30 ವರ್ಷದ ಶ್ರಮದ ಫಲವಿಂದ ಕಟ್ಟಿದಂಥ ಈ ಸಂಸ್ಥೆಗೆ ಒಂದು ರೀತಿಯ ಪೆಟ್ಟು ಬಿದ್ದಂತಾಯಿತು ಎಂದು ಹೇಳಬೇಕಾಗುತ್ತದೆ. ಅವರು ಈ ಸಂಸ್ಥೆಯ ಒಂದು ಶೈಯಸ್ಸಿಗೋಸ್ಕರ ದುಡಿದಂಥ ವ್ಯಕ್ತಿ. ಯಾವಾಗ ಎ. ಆರ್. ದಿವಾಕರ್‌ರವರನ್ನು ನೇಮಕ ಮಾಡಿದರೋ, ಆಗಿನಿಂದ ಆ ಸಂಸ್ಥೆಯಲ್ಲಿ ಅವ್ಯವಹಾರ ಪ್ರಾರಂಭವಾಯಿತು. ಆ ರೀತಿ ಅವ್ಯವಹಾರ ಪ್ರಾರಂಭವಾದಾಗ ಶ್ರೀಮಾನ್ ಮೊಹರೆಯವರು ಆ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು ಆ ಸ್ಥಾನದಿಂದ ಅವರು ಬಹಿಷ್ಕಾರದಿಂದ ನಿರ್ಗಮಿಸ ಬೇಕಾಗಿ ಬಂದಿತು. ಅವರು ನಿರ್ಗಮಿಸಿದ ಮೇಲೆ ಈ ಒಂದು ದುರ್ಮಿಷದ ಸ್ಥಿತಿಗೆ ಇಳಿಯಿತು. ರಾಷ್ಟ್ರದ ಹಿರಿಯ ನಾಯಕರು ಆಗಿದ್ದಂಥ ವ್ಯಕ್ತಿಯ ಕೈಯಲ್ಲಿ ಅದು ಇದ್ದಿದ್ದರೆ ಈ ಒಂದು ಪರಿಸ್ಥಿತಿಗೆ ಆ ಒಂದು ಸಂಸ್ಥೆಯನ್ನು ತಂದು ಒಡ್ಡುತ್ತಾ ಇರಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ ಮತ್ತು ನೊಂದು ಹೇಳಬೇಕಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬಾರದಾಗಿತ್ತು. ಪಾನ್ಯ ಎ. ಆರ್. ದಿವಾಕರ್‌ರವರ ಒಂದು ಮ್ಯಾನೇಜ್‌ಮೆಂಟ್ ಪ್ರಾರಂಭವಾದ ಮೇಲೆ ಹಲವಾರು ರೀತಿಯ ಅವ್ಯವಹಾರಗಳನ್ನು ಅವರು ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ಅವರ ಅಧಿಕಾರಿ ವರ್ಗದವರೇ ತಿಳಿಸಿದ್ದಾರೆ. ಈ ಅವ್ಯವಹಾರ ಪ್ರಾರಂಭವಾದ ಮೇಲೆ ಇದನ್ನು ತಪ್ಪಿಸಬೇಕು, ಇದರ ಮೇಲೆ ಒಂದು ಮೇಲ್ವಿಚಾರಣೆ ಇರಬೇಕೆಂದು ಆರ್. ಆರ್. ದಿವಾಕರ್‌ರವರು 1968 ರಲ್ಲಿ ಒಂದು ಮ್ಯಾನೇಜಿಂಗ್ ಕಮಿಟಿ ಮಾಡಿದರು. ಆ ಕಮಿಟಿಯಲ್ಲಿ ಯಾರು ಯಾರಿದ್ದರು ಎಂದರೆ 1) ಶ್ರೀ ಜಿ. ಎ. ಆಚಾರ್ಯ, 2) ಶ್ರೀ ಚಿನ್ನಸ್ವಾಮಿ, 3) ಶ್ರೀ ಎಚ್. ಬಿ. ದಾತಾರ್ ಇವರುಗಳನ್ನೊಳಗೊಂಡ ಒಂದು ಮ್ಯಾನೇಜಿಂಗ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದರು. ಈ ರೀತಿ ಕಾನ್‌ಸ್ಟಿಟ್ಯೂಟ್ ಮಾಡಿದ ಒಂದೇ ತಿಂಗಳಿನಲ್ಲಿ ಆ ಕಮಿಟಿಯನ್ನು ಬರ್‌ಕಾಸ್ಟ್ ಕೂಡ ಮಾಡಿದರು. ಪುನಃ ಅವರು ಯಾವ ರೀತಿ ಡಿಸ್ಟ್ರಿಕ್ಟ್ ಕೋರ್ಟಿನ ಮುಂದೆ ಅಪ್ಲಿಕೇಷನ್ ಫೈಲ್ ಮಾಡಿದ್ದಾರೆ ಎಂದರೆ ''ಬಾಂಬೆ ಟ್ರಸ್ಟ್ ಆಕ್ಟ್'' ಪ್ರಕಾರ ಒಂದು ಕೋರ್ಟ್ ಟ್ರಸ್ಟ್‌ನ್ನು ನೇಮಕ ಮಾಡುವುದಕ್ಕೆ ಅನುಮತಿ ಕೊಡಿ ಎಂದು ಧಾರವಾಡದ ಡಿಸ್ಟ್ರಿಕ್ಟ್ ಕೋರ್ಟ್‌ನ ಮುಂದೆ ಅಪ್ಲಿಕೇಷನ್ ಫೈಲ್ ಮಾಡುತ್ತಾರೆ. ಡಿಸ್ಟ್ರಿಕ್ಟ್ ಕೋರ್ಟ್ ಅದನ್ನು ಪರಿಗಣನೆ ಮಾಡಿದ ಮೇಲೆ ಅವರು ಪರ್ಮಿಷನ್ ಕೊಡುತ್ತಾರೆ.

ಪರ್ಮಿಷನ್ ಕೊಟ್ಟ ಮೇಲೆ ಅದರಲ್ಲಿ ಶ್ರೀ ಎ. ಆರ್. ದಿವಾಕರ್, ಅವರ ಅಣ್ಣನ ಮಗ ಎ. ಎಸ್. ದಿವಾಕರ್, ಮತ್ತು ಶ್ರೀ ಎಚ್. ಜಿ. ಗುತ್ತಲ್ ಈ ಮೂರು ಜನ ಒಂದು ಕೋ ಟ್ರಸ್ಟ್‌ನ್ನು ನೇಮಕ ಮಾಡುತ್ತಾರೆ. ಮಾನ್ಯ ಸಭಾಧ್ಯಕ್ಷರೇ ಈ ರೀತಿ ನಾವು ಮಾತನಾಡುವಾಗ ಇದರ ಹಿನ್ನೆಲೆಯನ್ನೆಲ್ಲಾ ಹೇಳುವಾಗ ಅನಿವಾರ್ಯವಾಗಿ ಹೆಸರುಗಳನ್ನು ಹೇಳಲೇಬೇಕಾಗುತ್ತದೆ. ಅದಕ್ಕಾಗಿ ತಮ್ಮ ಅನುಮತಿಯನ್ನು ನಾನು ಮೊದಲೇ ಕೇಳಿದ್ದೇನೆ. ಹೇಗೆ ಈ ಸಂಸ್ಥೆ ಅವನತಿಗೆ ಇಳಿಯಿತು ಎನ್ನುವ ಬಗ್ಗೆ ಹೇಳಬೇಕಾದರೆ ಹೆಸರುಗಳನ್ನು ಹೇಳದೇ ಗತ್ಯಂತರವಿಲ್ಲ. ಯಾರ ಮುಖಕ್ಕೂ ಟಾರ್ ಹೊಡೆಯುಬೇಕು ಎನ್ನುತಕ್ಕಂಥದ್ದು ಇಲ್ಲ. ಅವರು ಒಂದು ಕೋ ಟ್ರಸ್ಟ್ ಎಂದು ನೇಮಕ ಮಾಡಿದ ಮೇಲೆ ಆ ಕೋ ಟ್ರಸ್ಟ್‌ನವರು ಒಂದು ಸಭೆ ಸೇರಿ ರೂಲ್ಸ್ ರೆಗ್ಯುಲೇಷನ್ ಇವನ್ನೆಲ್ಲಾ ಫ್ರೇಂ ಮಾಡಿಕೊಳ್ಳುತ್ತಾರೆ. ಅದರ ಪ್ರಕಾರ ಕೆಲಸ ಮಾಡುತ್ತಾರೆ. ಆ ರೀತಿ ಕೆಲಸ ಮಾಡುವ ಪ್ರಾರಂಭದಲ್ಲಿ ಶ್ರೀಮಾನ್ ಎಚ್. ಜಿ. ಗುತ್ತಲ್‌ರವರು, ಶ್ರೀ ದಿವಾಕರ್‌ರವರ ಮಗ ಶ್ರೀ ಎ. ಆರ್. ದಿವಾಕರ್‌ರವರ ಅವ್ಯವಹಾರಗಳನ್ನೆಲ್ಲಾ ತಂದೆಯ ಗಮನಕ್ಕೆ ತರುತ್ತಾರೆ. ಇದು ಒಂದು ಸಾರ್ವಜನಿಕ ಸಂಸ್ಥೆ, ಸಾರ್ವಜನಿಕರ ಶ್ರಮದಾನದಿಂದ ಕಟ್ಟಿದಂಥ ಸಂಸ್ಥೆ, ಅನೇಕ ಜನ ಇವತ್ತು ಇದರಲ್ಲಿ ಹಣವನ್ನು ಡಿಪಾಜಿಟ್ ಮಾಡಿದ್ದಾರೆ. ಇದರಲ್ಲಿ ಅನೇಕ ಜನ ಹಣವನ್ನು ತೊಡಗಿಸಿದ್ದಾರೆ. ನಾವು ಈ ರೀತಿ ಕೋ ಟ್ರಸ್ಟಿಯಾಗಿ ಕೆಲಸ ಮಾಡುವಂಥ ಕಾಲದಲ್ಲಿ ಈ ರೀತಿ ಹಣವನ್ನು ದುರ್ವ್ಯವಹಾರ ಏನು ಮಾಡುತ್ತಿದ್ದಾರೆ, ಖರ್ಚು ಮಾಡುತ್ತಿದ್ದಾರೆ, ಈ ರೀತಿ ಮಾಡುತ್ತಾ ಇರತಕ್ಕಂಥದ್ದು ಯೋಗ್ಯವಲ್ಲ, ಇನ್ನು ಮುಂದಾದರೂ ತಡೆಹಿಡಿಯಬೇಕೆಂದು ಅವರ ತಂದೆಗೆ ಪತ್ರ ಬರೆದಿದ್ದಾರೆ. ಕೋ ಟ್ರಸ್ಟ್‌ನಲ್ಲಿದ್ದ ಶ್ರೀ ಗುತ್ತಲ್‌ರವರು ತೆಗೆದುಕೊಂಡಂಥ ಈ ನೀತಿಯನ್ನು ಸಹಿಸಲಾರದೆ ಶ್ರೀಮಾನ್ ಆರ್. ಆರ್. ದಿವಾಕರ್‌ರಾಯರೇ ಇವರ ಕೋ ಟ್ರಸ್ಟೀ ಷಿಪ್‌ನ್ನು ತಾವೇ ಕಿತ್ತು ಹಾಕಿದ್ದೇವೆಂದು ಹೇಳಿ ಒಂದು ನಿರ್ಣಯ ಮಾಡಿದ್ದಾರೆ. ಡಿಸ್ಟ್ರಿಕ್ಟ್ ಕೋರ್ಟ್‌ನ ಆದೇಶಕ್ಕೆ ಅನುಗುಣವಾಗಿ ಕೋ ಟ್ರಸ್ಟ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆಂದು ಹೇಳಿದವರೆ, ಇವರ ಟ್ರಸ್ಟೀಷಿಪ್ಪನ್ನು ಕಿತ್ತುಹಾಕಿದ್ದೇವೆಂದು ನಿರ್ಣಯ ಮಾಡುತ್ತಾರೆ. ಈ ನಿರ್ಣಯವನ್ನು, ಆರ್. ಆರ್. ದಿವಾಕರ್‌ರವರು ಮಾಡಿದ ಮೇಲೆ, ಶ್ರೀಮಾನ್. ಎಚ್. ಜಿ. ಗುತ್ತಲ್‌ರವರು ಅವರ ಟ್ರಸ್ಟೀ ಷಿಪ್‌ನ್ನು ಕಿತ್ತುಹಾಕಿದ್ದು ಸರಿಯಲ್ಲವೆಂದು ಬೆಳಗಾಂ ಕೋರ್ಟಿನಲ್ಲಿ ಅರ್ಜಿಯನ್ನು ನಲ್ಲಿಸಿದ್ದಾರೆ. ಇದರ ಬಗ್ಗೆ ಅಂತಿಮವಾದ ನಿರ್ಧಾರವನ್ನು, ಇತ್ಯರ್ಥವನ್ನು ನಾವು ಮಾಡಬೇಕಾ, ಅವರಿಗೆ ಅಧಿಕಾರವಿಲ್ಲ. he was also one of the trustees in the Board, he has no power to remove another co-trustee ಎಂದು ಹೇಳಿ ಅವರು ಅರ್ಜಿಯನ್ನು ನಲ್ಲಿಸಿಕೊಂಡಿದ್ದಾರೆ. ಅದು ಕೂಡ ಕೋರ್ಟಿನ ಮುಂದೆ ಪೆಂಡಿಂಗ್‌ನಲ್ಲಿ ಇದೆ. ಅದು ಸಬ್‌ಜ್ಯುಡಿಯಸ್ ಆಗುತ್ತದೆ. ಮಾನ್ಯ ಅಧ್ಯಕ್ಷರೇ ಈ ಒಂದು ಹಿನ್ನೆಲೆಯಲ್ಲಿ ನಾವು ಏತಕ್ಕೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ ಈ ಕೋ ಟ್ರಸ್ಟಿಯನ್ನು ರಿವೋವ್ ಮಾಡುವುದಕ್ಕೆ ಈ ಎರಡೂ ಪಕ್ಷಗಳಿಗೆ ಮುಖ್ಯವಾದ ಕಾರಣ ಆರ್. ಆರ್. ದಿವಾಕರ್‌ರವರ ಮಗನೇ. ಇದರಿಂದ ಮಾನ್ಯ ಗುತ್ತಲ್‌ರವರನ್ನು ತೆಗೆಯಬೇಕಾಯಿತು. ಮತ್ತೆ ಮುಂದೆ ಆರ್. ಆರ್. ದಿವಾಕರ್‌ರವರ ಅಣ್ಣನ ಮಗ ಏನು ಮಾಡಿದ್ದಾರೆ ಎಂದರೆ ಅವರು ಸಹ ಕೋರ್ಟಿನ ಮುಂದೆ ಹೋಗಿ ಈ ಕೋ ಟ್ರಸ್ಟೀಯನ್ನು ತೆಗೆದುಹಾಕುವುದು ಸರಿಯಾಗಿದೆ ಎಂದೂ ಇವರ ಅವಶ್ಯಕತೆ ಇಲ್ಲವೆಂದು, ಹಾಗೂ ಕೋರ್ಟ್ ನಿರ್ಣಯ ಕೊಡಲಿಕ್ಕೆ ಅನುಕೂಲವಾಗಲಿ ಎಂದು ಒಪ್ಪಿಗೆಯನ್ನು ಸೂಚಿಸಿದ್ದಾರೆ. ಇವತ್ತು ಈ ಒಂದು ಸಂಸ್ಥೆ ಬೇರೆಯವರ ಕೈಗೆ ಹೋಗ ತಕ್ಕಂಥ ನಂಜು ನಡೆಯುತ್ತಿದೆ. ಎನ್ನತಕ್ಕಂಥದ್ದು ಮತ್ತು ಕೋರ್ಟಿನ ಮುಂದೆ ಗುತ್ತಲ್‌ರವರ ಅರ್ಜಿ ಇದೆ ಎಂದು ಈ ಎರಡು ವಿಷಯದಲ್ಲಿ ನಾವು ಇಂದು ಈ ಸಭೆಯಲ್ಲಿ ಚರ್ಚೆಮಾಡುತ್ತಿದ್ದೇವೆ. ಈ ಒಂದು ಸಾರ್ವಜನಿಕ ಟ್ರಸ್ಟಿನ ಬಗ್ಗೆ ಚರ್ಚೆಯಾಗಬೇಕಾದಂಥ ಅವಶ್ಯಕತೆ ಏನಿದೆ ಎನ್ನುವುದರ ವಿಷಯದಲ್ಲಿ ವಿವರಣೆಯನ್ನು ಹಾಗೂ ಅದರ ಹಿನ್ನೆಲೆಯನ್ನು ಸಹ ನಾನು ಹೇಳಿದ್ದೇನೆ. ಸುಮಾರು 30 ರಿಂದ 35 ಲಕ್ಷ ರೂಪಾಯಿಗಳ ಹಣವನ್ನು ಸಾರ್ವಜನಿಕರು ಈ ಸಂಸ್ಥೆಯಲ್ಲಿ ತೊಡಗಿಸಿದ್ದಾರೆ.

ಇದಕ್ಕೆ ಅನೇಕ ಜನ ಕಂಟ್ರಿಬ್ಯೂಷನ್ ಕೊಟ್ಟಿದ್ದಾರೆ. ಸಾರ್ವಜನಿಕರು ಹಲವಾರು ರೀತಿಯ ಸಹಾಯವನ್ನು ಮಾಡಿದ್ದಾರೆ. ಇವತ್ತು 35 ಲಕ್ಷ ರೂಪಾಯಿಗಳು ಒಂದು ಕಡೆ, ಮತ್ತೊಂದು ಕಡೆ ನಮ್ಮ ಎಂಪ್ಲಾಯೀಸ್ ಏನು ಇದ್ದಾರೆ, ಅವರು ಕಟ್ಟುವರ್ತಕ್ಕ ಗ್ರಾಚ್ಯುಯಿಟಿ ಹಣ, ಮತ್ತು ಅವರು ಎಲ್. ಐ. ಸಿ. ಗೆ ಕಟ್ಟುವರ್ತಕ್ಕ ಇನ್‌ಷ್ಯೂರೆನ್ ಪ್ರೀಮಿಯಂ ಅನ್ನೂ ಕೂಡ ಇವರು ದುರುಪಯೋಗ ಮಾಡಿದ್ದಾರೆ. ಆ ಮೇಲೆ ಇವರ ಪ್ರಾವಿಡೆಂಟ್ ಫಂಡ್ ಏನು ಇದೆ ಅದನ್ನೂ ಹೊಡೆದು ಕೊಂಡಿದ್ದಾರೆ. ಹೀಗೆ ಸುಮಾರು 60—65 ಲಕ್ಷ ರೂಪಾಯಿಗಳ ದುರುಪಯೋಗ ಆಲ್ಲಿ ಆಗಿದೆ. ಸಾಕಷ್ಟು ಪ್ರಮಾಣದಲ್ಲಿ ದುರ್ವ್ಯವಹಾರ ನಡೆದಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗುತ್ತದೆ. ಅದಕ್ಕೆ ನಾನು ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ಯಾರು ಎಷ್ಟೇ ದೊಡ್ಡ ಅಂತಸ್ತಿನಲ್ಲಿ ಇರಬಹುದು, ಯಾವ ರೀತಿಯ ಪ್ರಮಾಣದಲ್ಲಾಯೇ ಇರಲಿ ಯಾವುವೇ ಎತ್ತರದ

(ಶ್ರೀ ಬಿ. ಡಿ. ದೇವೇಗೌಡ)

ಸ್ಥಾನದಲ್ಲಿಯೇ ಇದಲಿ, ಹಿಂದೆ ಕೆಲಸ ಮಾಡಿರಲಿ, ಅವರು ಸಾರ್ವಜನಿಕ ಜೀವನದಲ್ಲಿ ಹಣವನ್ನು ದುರುಪಯೋಗ ಮಾಡಿದ್ದರೆ, ಇಂದು ನಮ್ಮ ಕಣ್ಣಿದುರಿಗೆ ಇರತಕ್ಕ ನ್ಯೂಜ ಚಿತ್ರ ನಿಷ್ಟನ್ನರದು ಮಾನ್ಯ ಸಿಕ್ಕ್ನಾರನ್ನು ಜೈಲಿಗೆ ಕಳುಹಿಸಬೇಕಾಗುತ್ತದೆ ಎನ್ನುವುದರ ಬಗ್ಗೆ ವಿಚಾರಣೆ ಮಾಡಲಿಕ್ಕೆ ಹೊರಟಿದ್ದಾರೆ. ಇವತ್ತು ಸಾರ್ವಜನಿಕ ಹೊಣೆಯನ್ನು ಹೊತ್ತಿರತಕ್ಕ ಕಾಲದಲ್ಲಿ ಈ ನಂಜಿ ಯಾವುದೇ ಒಂದು ಕುಟುಂಬದ ಸ್ವತ್ತಲ್ಲ, ಯಾವುದೇ ಮನೆಯ ಸ್ವತ್ತಲ್ಲ, ಯಾವ ವ್ಯಕ್ತಿಯ ಸ್ವತ್ತಲ್ಲ, ಇದು ಹತ್ತು ಜನರು ಸಾರ್ವಜನಿಕರ ಸ್ವತ್ತು. ಆ ಸ್ವತ್ತನ್ನು ವೈಯಕ್ತಿಕ ಲಾಭಕ್ಕೋ ಸ್ಕರ ಕಬಳಿಸುವುದಕ್ಕೆ ಹೊರಟರೆ ನಾನು ಹೇಳುತ್ತೇನೆ, ಅಂಥವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಬೇಕಾಗುತ್ತದೆ. ಜರುಗಿಸತಕ್ಕಂಥ ಕಾಲದಲ್ಲಿ ಅವರ ಸಾರ್ವಜನಿಕ ರಂಗದ ಸ್ಥಾನ ಮಾನಗಳಿಗೆ ಬೆಲೆ ಕೊಡಬೇಕಾದ್ದು ಏನೂ ಇಲ್ಲ. ಬಡ ನೌಕರರು ಕಟ್ಟಿರತಕ್ಕ ಇನ್ಷೂರೆನ್ಸ್ ಹಣವನ್ನು ಇವರ ಕಟ್ಟಿಲ್ಲ, ಮಾತ್ರವಲ್ಲ, ಅವರ ಪ್ರಾವಿಡೆಂಡ್ ಫಂಡ್ ಹಣವನ್ನು ಕಬಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನೌಕರರ ಇನ್ಷೂರೆನ್ಸ್ ಪಾಲಿಸಿಗಳು ಲ್ಯಾಪ್ಸ್ ಆಗಿರತಕ್ಕದ್ದಕ್ಕೆ ಯಾರು ಹೊಣೆ? ಆದ್ದರಿಂದ ಸರ್ಕಾರ ಈ ದಿಸೆಯಲ್ಲಿ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕೋ ಟ್ರಸ್ಟೀವಿಷಯ ಕೋರ್ಟ ಮುಂದೆ ಅಂತಿಮ ನಿರ್ಣಯ ಆಗದೇ ಇರತಕ್ಕ ಸಮಯದಲ್ಲಿ ಸಕ್ಸಸ್ಸೀವ್ ಟ್ರಸ್ಟೀಸ್ ಎಂದು ಹೇಳಿ ಇಬ್ಬರನ್ನು ನೇಮಕ ಮಾಡಿದ್ದಾರೆ. ಅವರು ಯಾರು ಎಂದರೆ. ಒಬ್ಬರು ಬಿ. ವಿ. ಭಂಡಾರಿ, ಮತ್ತೊಬ್ಬರು ನವಾತಾ. ಇವರಿಬ್ಬರನ್ನು ಸಕ್ಸಸ್ಸೀವ್ ಟ್ರಸ್ಟೀಸ್ ಎಂದು ಹೇಳಿ ನೇಮಕ ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—ಈ ಕೇಸ್, ಇವೆಲ್ಲವೂ ಕೂಡ ಈಗ ಚಾರಿಟಿ ಕಮಿಷನರ್ ಎದುರಿಗೆ ವಿಚಾರಣೆ ನಡೆಯುತ್ತಿವೆ. ಚಾರಿಟಿ ಕಮಿಷನರ್ ಆಗಲೀ, ಅಸಿಸ್ಟೆಂಟ್ ಚಾರಿಟಿ ಕಮಿಷನರ್ಆಗಲಿ ಜ್ಯೂಡಿಶಿಯರ್ ಆಫೀಸರ್ ಆಗಿ ತೀರ್ಮಾನವನ್ನು ಕೈಗೊಳ್ಳಬೇಕಾಗುತ್ತದೆ; ಹಾಗೂ ಕೆಲಸಮಾಡಬೇಕಾಗುತ್ತದೆ. ಆದ್ದರಿಂದ ಹೆಚ್ಚು ವಿಷಯಗಳಿಗೆ ಹೋಗದೆ ಇರುವುದು ಸೂಕ್ತ. ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಏನು ಏನು ಹೇಳುತ್ತಿದ್ದಾರೆ, ಆವು ಗಳಲ್ಲಿ 291-72, 317, 476, 49 ಈ ನಾಲ್ಕು ಕೇಸುಗಳು ಅವರ ಮುಂದೆ ವಿಚಾರಣೆಯಾ ಗುತ್ತಿವೆ. ಆದ್ದರಿಂದ ಹೆಚ್ಚು ವಿಷಯಗಳನ್ನು ಇಲ್ಲಿ ಪ್ರಸ್ತಾಪಮಾಡದೇ ಇರುವುದು ಒಳ್ಳೆಯದು. ಇಲ್ಲದಿದ್ದರೆ ಅದು ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಅದರ ಮೆರಿಟ್ಸ್ ಬಗ್ಗೆ, ಕೋರ್ಟಿನಲ್ಲಿ ಹಾಕಿರತಕ್ಕ ಅಫಿಡವಿಟ್, ಸ್ಟೇಟ್‌ಮೆಂಟಿಫ್ ಕಾಪಿ ಪ್ರತಿಯೊಂದು ಎರಡ್ಮೂ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ನನ ಮುಂದೆ ಇರತಕ್ಕ ಪ್ರಶ್ನೆ ಎಂದರೆ ಒಂದು ಕಡೆ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ, ವತೆಯಿಂದು ಘೋಷ್ಡಡೆಯ ಕಡೆ ಈ ಸಂಸ್ಥೆಯನ್ನು ನಮ್ಮ ರಾಜ್ಯದಹಣಕಾಸಿನ ಸಚಿವರು ಘೋಷ್ಡಡೆಯಿರಿಗೆ ಸಂಬಂಧಪಟ್ಟ ಸೋದೂರು ಕಂಪನಿಯವರು ಕೊಳ್ಳತಕ್ಕ ವ್ಯವಹಾರ ನಡೆದಿದೆ. ಇದು ಪ್ರಾಮಾಣಿಕವಾಗಿ ನಮ್ಮ ಮುಂದೆ ಇರತಕ್ಕ ಪ್ರಶ್ನೆ, ಇದನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಂದಿದ್ದೇನೆ. ಇವತ್ತು ನಮ್ಮ ರಾಜ್ಯ ಸರ್ಕಾರದ ಒಂದು ಕೆಲಸ ಏನೆಂದರೆ, ಸಾರ್ವಜನಿಕ ಹಣವನ್ನು ಇವರು ಕಾಪಾಡಬೇಕು. ಪಬ್ಲಿಕ್ ಟ್ರಸ್ಟ್‌ನಲ್ಲಿ ಜನ ವಿಶ್ವಾಸವನ್ನಿಟ್ಟು ತೊಡಗಿಸತಕ್ಕ ಹಣಕ್ಕೆ ಧಕ್ಕೆ ಬಾರದ ರೀತಿಯಲ್ಲಿ ನೋಡಿಕೊಳ್ಳ ಬೇಕಾದ ಜವಾಬ್ದಾರಿ ಸರ್ಕಾರದ್ದು. ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಚಾರಿಟಿ ಕಮಿಷನರ್ ಸರಿಯಾದ ರೀತಿಯಲ್ಲಿ ಕೆಲಸಗಳನ್ನು ನಿರ್ವಹಣೆ ಮಾಡಿಲ್ಲ ಎಂದು ಹೇಳಬಹುದು. ಚಾರಿಟಿ ಕಮಿಷನರ್ ಅವರ ಬಗ್ಗೆ ನನ್ನ ಅಪಾದನೆ ಇದೆ. ಕೋರ್ಟ್‌ಟ್ರಸ್ಟೀನಲ್ಲಿರತಕ್ಕ ಕೋ-ಟ್ರಸ್ಟೀ ಯನ್ನು ತಗೆಯತಕ್ಕ ಅಧಿಕಾರ ಆರ್. ಆರ್. ದಿವಾಕರ್ ಅವರಿಗೆ ಇದೆಯೇ ಎನ್ನುವುದರ ಬಗ್ಗೆ ನಾನು ನಿರ್ಣಯ ವ್ಯಕ್ತಪಡಿಸಲಿಕ್ಕೆ ಹೋಗುವುದಿಲ್ಲ. ಹಣ ದುರುಪಯೋಗವಾಗಿದೆ, ನುಮಾರು 15 ವರ್ಷ ವ್ಯವಹಾರದಲ್ಲಿ ಸಾಕಷ್ಟು ಹಣ ಅವ್ಯಯವಾಗಿ ಅವರು ತಮ್ಮ ಸೇವಾ ವ್ಯಾಪ್ತಿಯಲ್ಲಿ ಸರಿ ಯಾದ ರೀತಿಯಲ್ಲಿ ಕೆಲಸ ಮಾಡಿಲ್ಲ ಎಂದು ನಾನು ಚಾರ್ಜ್ ಮಾಡಬೇಕಾಗುತ್ತದೆ. ಬಾಂಬೆ ಟ್ರಸ್ಟ್ ಆಕ್ಟ್ ಪ್ರಕಾರ ಇವರನ್ನು ವಿಚಾರಣೆ ಮಾಡಿ, ಸರ್ಚಾರ್ಜ್ ಮಾಡಲಿಕ್ಕೆ ಅಧಿಕಾರ ಇದೆ. ಇವರ ಮೇಲೆ ಕಾಯಿದೆ ಜರುಗಿಸಲಿಕ್ಕೆ ಚಾರಿಟಿ ಕಮಿಷನರ್‌ಗೆ ಅಧಿಕಾರ ಇದೆ. ಅವರು ಆ ಕೆಲಸವನ್ನು ಮಾಡಿದ್ದಾರೆಯೇ ? ಈ ಕೆಲಸವನ್ನು ಅವರು ನಿರ್ವಹಣೆ ಮಾಡದೆ ಇರುವುದಕ್ಕೆ ಎದುರು ಬಂದಿರ ತಕ್ಕ ಶಕ್ತಿಗಳು ಯಾರು ? ಮತ್ತು ಇದನ್ನು ತಡೆಗಟ್ಟತಕ್ಕದ್ದಕ್ಕೆ ಕಾರಣ ಏನು ಇದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೇಸ್ ಕೂಡ ಅವರ ಮುಂದೆ ಇವೆ. ವಿಚಾರಣೆಯಾಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಒಂದು ನೋಟಿಸನ್ನು ಅವರಿಗೆ ಕೊಟ್ಟಿದ್ದೀರಿ. ಸುಮಾರು 20 ಲಕ್ಷ ರೂಪಾಯಿಗಳು ನಿಮಗೆ ಬರಬೇಕು ಎಂದು. ಸರ್ಕಾರಕ್ಕೆ ಬರಬೇಕಾದ ಹಣ ಇದೆ, ಆದ್ದರಿಂದ ಅವರಿಗೆ ನೋಟೀಸ್ ನೀಡಿದ್ದೀರಿ. ಅದರ ಮೇಲೆ ಮತ್ತೆ ಅವರು ಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿದ್ದಾರೆ. ಸ್ಟೇ ವೆಕೇಟ್ ಮಾಡುವಂತೆ 9-10ಜನ ಲಾಯರ್ಸ್ ಅರ್ಜಿ ಹಾಕಿದ್ದಾರೆ. ಸರ್ಕಾರದವರಿಗೆ ಇವರ ಬಗ್ಗೆ ಗಮನ ಹರಿಸಿದೆಯೋ ಇಲ್ಲವೋ ಗೊತ್ತಿಲ್ಲ. ಈ ಸ್ಟೇ ಆರ್ಡರನ್ನು ವೆಕೇಟ್ ಮಾಡಿಸಲಿಕ್ಕೆ ಎಷ್ಟರಮಟ್ಟಿಗೆ ಸರ್ಕಾರದ ಪ್ಲೀಡರ್ ಕೆಲಸಮಾಡಿದ್ದಾರೆ ಎನ್ನುವುದನ್ನು ತಾವು ತಿಳಿಸಬೇಕು. ಒಂದು ವರ್ಷದಿಂದ ಏನೂ ಕೆಲಸವಾಗಿಲ್ಲ ಎಂದು ನಾನು ತಿಳಿದಿದ್ದೇನೆ. ಈ ಮಧ್ಯೆ ಈ ಒಂದು ಸಂಸ್ಥೆಯನ್ನು ತಗೆದುಕೊಳ್ಳುತಕ್ಕ ವ್ಯವಹಾರವೂ ನಡೆದಿದೆ. ಸೊಂಡೂರು ಕಂಪನಿಯವರು ಇದನ್ನು ಕೊಳ್ಳಬೇಕು ಎಂದು ಮಾಡಿದ್ದಾರೆ. ಹೇಗೆ ಕೊಳ್ಳಬೇಕು ? ಇದು ಒಂದು ಚಿದಂಬರ ರಹಸ್ಯ. ನಾನು ಸ್ವಲ್ಪ ನೇರವಾಗಿ ಅಪಾದನೆ ಮಾಡುತ್ತೇನೆ, ಮಾಡಬೇಕಾಗುತ್ತದೆ. ಏಕೆಂದರೆ, ಈ ಸಂಸ್ಥೆ ಸುಮಾರು ಒಂದು, ಒಂದುಕಾಲ ಕೋಟಿ ರೂಪಾಯಿಗಳ ಅಸೆಟ್ಸಿನಿಂದ ಕೂಡಿರತಕ್ಕದ್ದು ಇದೆ. ಈ ಸಂಸ್ಥೆಗೆ ಲಯಬಿಲಿಟೀಸ ಸಹ ಇದೆ. ಅವ್ಯವಹಾರಗಳಿಂದ ಸಾಕಷ್ಟು ಲಯಬಿಲಿಟೀಸ್ ಬಂದಿದೆ. ಅದರ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ. ಯಾರೇ ಇದಕ್ಕೆ ಹೊಣೆಗಾರರು ಆಗಿರಲೀ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಪ್ರೆಸ್ ಪಬ್ಲಿಕೇಷನ್ ಅನ್ನು ಪ್ರೈವೆಟೈಸ್ ಮಾಡುವುದು ಒಂದು ಭಾಗ, ಪ್ರೋಫರ್ಟ ಪ್ರೆಸ್ ಕೊಂಡರೆ, ತಲೆಯಮೇಲೆ ಹೋಗುತ್ತದೆ. ಆದ್ದರಿಂದ ಒಂದು ಭಾಗವನ್ನು ಕೊಳ್ಳಬೇಕೆಂದಿದ್ದಾರೆ.

ಈಗ ಈ ಪಬ್ಲಿಕೇಷನ್ನಿನ ಭಾಗವನ್ನು ಕೊಂಡುಕೊಳ್ಳುವ ಪರಿಸ್ಥಿತಿಯಿದೆ, ಸೊಂಡೂರು ಕಂಪೆನಿಯವರು ಇದನ್ನು ಕೊಳ್ಳಲಿದ್ದಾರೆ. ಹೀಗಾದರೆ ಟ್ರಸ್ಟ್ ಹೇಗೆ ಉಳಿಯುವುದು ? ಇದು ಒಂದು ವಿಷಯ.

ಮತ್ತೊಂದು ವಿಷಯ: ಸೊಂಡೂರು ಕಂಪೆನಿಯ ಅಡಿಟರುಗಳು ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ 3 ತಿಂಗಳಿಂದ ಮೊಕ್ಕಾಂ ಮಾಡಿದ್ದಾರೆ, ಪತ್ರಿಕೆಯಲ್ಲಿ ಇದು ಬಂದಿದೆ. ಅದರೆ ಇಷ್ಟು ದೂರು ಬಂದರೂ ಸಹ ಚಾರಿಟಿ ಕಮಿಷನ್ನಿನವರು ಯಾರೂ ಅಡಿಟ್ ಮಾಡಲು ಹೋಗಿಲ್ಲ.

Sri D. DEVARAJ URS. —I would like to submit one thing. We are not objecting to what Mr. Deve Gowda says. But, there should be some limit within which we have to function.

Sri H. D. DEVE GOWDA.—I don't want to take more time unnecessarily.

Sri D. DEVERAJ URS.—How long shall we sit ?

Sri DEPUTY SPEAKER.—I am prepared to sit any length of time. But, yesterday, some hon. Members complained that they could not get meals because of late sitting.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಊರಿನಲ್ಲಿರುವುದಿಲ್ಲವೆಂದು ಕೇಳಿದ್ದೇನೆ.

ಶ್ರೀ ಎನ್, ಹುಚ್ಚಮಾಸ್ತಿಗೌಡ.—ಉತ್ತರವನ್ನು ಯಾರಾದರೂ ಕೊಡುವರು. ಮೊದಲನೆ ಕಾರ್ಯಕ್ರಮದ ಪ್ರಕಾರ ಈ ತಿಂಗಳು 31ಕ್ಕೆ ಈ ಸಭೆ ಮುಗಿಯಬೇಕಾಗಿತ್ತು. ಈಗ ಇನ್ನೂ ಹೆಚ್ಚು ದಿವಸ ಸಭೆ ನಡೆಯುವುದಕ್ಕೆ ಅವಕಾಶವಿರುವುದರಿಂದ ನಾನಿಲ್ಲದಿದ್ದರೆ ಬೇರೆ ಮಂತ್ರಿಗಳು ಯಾರಾದರೂ ಉತ್ತರ ಕೊಡುವರು.

Sri D. DEVERAJ URS.—I think the discussion is not more than 2½ hours. I have no objection if you fix the time. But, they must be as brief as possible. Whatever they say, we don't come in their way.

ಶ್ರೀ ಎಚ್. ಡಿ. ದೇವೇಗೌಡ.—ಎರಡೂವರೆ ಗಂಟೆಯ ನಿಯಮವಿದೆ. ಆದರೆ ಎಲ್ಲಾ ಸೇರಿ ಒಂದೂಕಾಲ ಗಂಟೆಗಿಂತ ಜಾಸ್ತಿಯಾಗುವುದಿಲ್ಲ. ಘೋರ್ಪಡೆಯವರಿಗೆ ಸಂಬಂಧಪಟ್ಟ ಒಂದು ಕಂಪೆನಿಯವರು ತಮ್ಮ ಆಡಿಟರನ್ನು ಕಳಿಸಿದ್ದಾರೆ. ಅವರು 3 ತಿಂಗಳಿಂದ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಕ್ಯಾಂಪ್ ಮಾಡಿದ್ದಾರೆ. ಇವತ್ತು ಅವರ ಸಮಾಧಾನಕ್ಕೆ ಸಕ್ಕ ಹಾಗೆ ಪಬ್ಲಿಕೇಷನ್ ವಿಭಾಗವೇನಿದೆ ಅದರ ಅಸೆಟ್ಸ್ ಮತ್ತು ಲಯಬಿಲಿಟೀಸ್ ಇರುವುದನ್ನು ನೋಡಿ ಕೊಂಡುಕೊಳ್ಳಬೇಕು ಎಂದು ಕಂಪೆನಿ ರಿಜಿಸ್ಟ್ರೇಷನ್ ಮುಂತಾದ್ದಕ್ಕೆ ಅರ್ಜಿ ಹಾಕಿದ್ದಾರೆ. ಅಲ್ಲದೆ ಆರ್. ಆರ್. ದಿವಾಕರ್‌ರವರ ಮಗ ರಿಜಿಸ್ಟ್ರಾರಾಗುವುದಕ್ಕೆ ತಕರಾರಿಲ್ಲವೆಂದು ಹೇಳಿದ್ದಾರೆ, ಒಂದು ಕನ್‌ಸೆಂಟ್ ಲೆಟರ್ ಕೊಟ್ಟಿದ್ದಾರೆ. ಇದಾದ ಮೇಲೆ ನವಜಾತರವರು ಒಪ್ಪಿಗೆ ಕೊಟ್ಟಿಲ್ಲದಿರುವುದರಿಂದ ಪರ್ಚೇಸ್ ಡೀಲ್ ಏನಿದೆ ಅದು ವಿಳಂಬವಾಗಿದೆ. 25-8-1974ರಲ್ಲಿ ಅಶೋಕ ಹೋಟಲಿನಲ್ಲಿ ಡಿನ್ನರ್ ಪಾರ್ಟಿ ನಡೆಯಿತು. ಆಗ ನವಜಾತರವರಿಗೆ ಘೋರ್ಪಡೆಯವರು ನೇರಕ್ಕೆ ಇದಕ್ಕೆ ಕನ್‌ಸೆಂಟ್ ಕೊಡಬೇಕು, ತಕರಾರು ಹಾಕಬೇಡಿ ಎಂದು ಒತ್ತಾಯ ಮಾಡಿದ್ದಾರೆ. ಅವರಿಗೆ ನೀವು ಅಸೆಟ್ಸ್ ಏನು ವ್ಯಾಲ್ಯೂ ಮಾಡಿದ್ದೀರಿ ಅದನ್ನು ಒಪ್ಪುವುದಕ್ಕಾಗುವುದಿಲ್ಲ, ಅದು ಬಹಳ ಜಾಸ್ತಿಯಾಗುತ್ತದೆ, ನಾಳೆ ಸಾರ್ವಜನಿಕರು ಇದರ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಾಗ ಇದು ತಪ್ಪಾಗಿ ಕಾಣುವುದು ಎಂದು ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಆರ್. ಆರ್. ದಿವಾಕರ್‌ರವರ ಮಗ ಏನಾದರೂ ಮಾಡಿ ಇದನ್ನು ಮಾಡಬೇಕೆಂದಿದ್ದರು. ಅಮೃತಬಜಾರ್ ಪತ್ರಿಕೆ ಕೈಬಿಟ್ಟರು. ಅವರು ಪ್ರಯತ್ನ ಮಾಡಿದ್ದಾರೆ. ಕೇವಲ 36 ಸಾವಿರ ರೂಪಾಯಿಗಳ ಒಂದು ಕಂತು ಡಿಪಾಜಿಟ್ ಎಂದು ಕೊಡುವುದು, ಪ್ರಾವಿಡೆಂಟ್ ಫಂಡು ಮುಂತಾದ್ದೇನಿದೆ ಅದನ್ನು ಸ್ಥಿಮಿತವಾಡಿ ವಹಿಸಿಕೊಳ್ಳಬೇಕು ಎಂದು ಪ್ರಯತ್ನ ನಡೆಯುತ್ತೆಂದು ಕೇಳಿದ್ದೇನೆ. ಆದು ಬಹಳ ಕಡಮೆ ಎಂದಾಗ 68 ಲಕ್ಷದವರೆಗೆ ನೆಗೋಷಿಯೇಷನ್ ಆಯಿತೆಂದು ಕೇಳಿದ್ದೇನೆ. ಈ ಸಂಸ್ಥೆಯೇನಿದೆ ಇದು ಸಾರ್ವಜನಿಕ ಸಂಸ್ಥೆಯಾಗಿಯೇ ಬೆಳೆಯಬೇಕು, ಯಾರಿಗೂ ಕೊಳ್ಳುವುದಕ್ಕೆ ಅವಕಾಶವಿಲ್ಲ. ಕಾನೂನನ್ನು ಬದಿಗೊತ್ತಿ ಕೋರ್ಟ್‌ನಲ್ಲಿರುವ ಕೇಸನ್ನು ವಾಪಸು ಪಡೆಯಲು ಪ್ರಯತ್ನ ನಡೆದಿದೆ. They are prevailing upon some of these people to withdraw these cases. ಹಾಗೆ ಮಾಡಿ ಕೇಸನ್ನು ವಾಪಸು ಪಡೆದುಕೊಳ್ಳುವ ಕಲಾಪವನ್ನು ಪೂರ್ಣಮಾಡಬೇಕೆಂಬ ಪ್ರಯತ್ನ ಏದೆ.

ಇದು ತಪ್ಪಾಗುತ್ತದೆ; ಇದಕ್ಕೆ ಅವಕಾಶ ಕೊಡಬಾರದು. ಅವಕಾಶ ಕೊಟ್ಟರೆ ನಿಮಗೆ ಕೆಟ್ಟ ಹೆಸರು ಬರುವುದು. ಇದರ ಹಿಂದಿನ ಚಾರಿತ್ರ್ಯ ನನಗೆ ಗೊತ್ತಿದೆ. ನಿಮಗೂ ಗೊತ್ತಿರಬಹುದು.

So, you should not allow Mr. Ghorpade to complete this Deed. ಅವರು ದೊಡ್ಡವರಿರಬಹುದು, ಸಮಾಜವಾದದ ತಂತ್ರಕ್ಕಾಗಿ ಅವರಿಗೆ ಪತ್ರಿಕೆ ಬೇಕು. ಆದರೆ ಸಾರ್ವಜನಿಕರ ಹಣವನ್ನಿದೆ ಅದನ್ನು ಹಾಕಿ ಕಟ್ಟಿರುವ ಸಂಸ್ಥೆಯಿದು. ಇದರ ಧ್ಯೇಯ ಘೋರಣಿಗಳಿಗೆ ತಿಲಾಂಜಲಿ ಕೊಟ್ಟರೆ ವ್ಯರ್ಥವಾಗುತ್ತದೆ. ಆದುದರಿಂದ ಇದನ್ನು ಕೊಳ್ಳುವುದಕ್ಕೆ ಅವಕಾಶ ಕೊಡಬಾರದು. You must tell your colle ague that you should not enter into this Deed. ಇವತ್ತು ಸರಕಾರ ಒಬ್ಬ ಆಡ್ವಿನಿಸ್ಟ್ರೇಟರನ್ನು ನೇಮಕಮಾಡಬೇಕು. ಹಾಗೆ ಮಾಡಿ ಈ ಟ್ರಸ್ಟ್‌ಯಾವ ಧ್ಯೇಯಘೋರಣಿಗಳಿಗಾಗಿ ರಚಿಸಲ್ಪಟಿತ್ತೋ ಆದನ್ನು ಮುಂದುವರೆಸಲು ಅವಕಾಶ ಮಾಡಿ ಕೊಡಬೇಕು. ಯಾರೇ ಬೇರೆಯವರು ಕೊಳ್ಳುವುದಕ್ಕೆ ಅವಕಾಶ ಮಾಡಬಾರದು. ಈ ಸಂಸ್ಥೆಯನ್ನು ಬೆಳೆಸುವುದಕ್ಕೆ ಅವಕಾಶವಿದೆ. ಜನಾರ್ಧನ ಸಿಲ್ಕ್ ಹೌಸಿನವರು 4 ಸಾವಿರ ರೂಪಾಯಿ ಕೊಡಲು ಬಂದಿದ್ದರೆಂದು ಏನೋ ಹೇಳುವರು. ಈ ನಂದರ್ಭದಲ್ಲಿ ಅವ್ಯವಹಾರ ಮಾಡಿದವರನ್ನು ಬಾರ್‌ನಲ್ಲಿ ಇಡಬೇಕಾಗಿತ್ತು. ದಿವಾಕರ್‌ರವರಿಗೆ ಕೆಟ್ಟ ಹೆಸರು ಅವರಿಂದಲೇ ಬಂದಿದೆ.

1-30 P.M.

ಶ್ರೀ ಎನ್. ಹುಚ್ಚಮಾಸಿಗೌಡ.—ಕೋರ್ಟಿನಲ್ಲಿ ಈ ವಿಷಯ ಪ್ರಸ್ತಾಪವಾಗುತ್ತಿರುವಾಗ ಇಲ್ಲಿ ನಾವು ಇದರ ವಿಷಯವನ್ನು ಚರ್ಚೆ ಮಾಡುವುದು ಸರಿಯಲ್ಲವೆಂಬುದು ನನ್ನ ಖಚಿತವಾದ ಅಭಿಪ್ರಾಯ. ಈಗ ಮಾನ್ಯ ದೇವೇಗೌಡರೇನು ಆ ಥಾರಿಟೀಸ್ ವಿಚಾರ ಚರ್ಚೆ ಮಾಡುತ್ತಿದ್ದಾರೆ, ಆ ವಿಷಯದಲ್ಲಿ ಥಾರಿಟಿ ಕಮೀಷನರ ಮುಂದೆ ವಿಚಾರಣೆ ನಡೆಯುತ್ತಿದೆ. ಇಲ್ಲಿ ನಾವೀಗ ಇದರ ಬಗ್ಗೆ ನೇರವಾಗಿ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿರುವುದರಿಂದ ನಾವು ಆ ವಿಚಾರಣೆ ನಡೆಯುತ್ತಿರುವ ಕೇಸಿನ ವಿದ್ಯಮಾನದಲ್ಲಿ ಪ್ರವೇಶಮಾಡಿದಂತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಧಾರವಿಚೇ ಕಮಿಷನರ ಮುಂದೆ ವಿಚಾರಣೆಯಾಗು ತ್ತಿರುವ ವಿಷಯವೇನೆಂಬುದು ನನಗೆ ಗೊತ್ತಿದೆ. ಅಲ್ಲಿ ಆ ಕೋರ್ಟಿನಿಂದ ನೇಮಕವಾದ ಟ್ರಸ್ಟಿ ಗಳನ್ನು ತೆಗೆಯುವುದಕ್ಕೆ ಇವರಿಗೆ ಹಕ್ಕಿದೆಯೇ ಇಲ್ಲವೇ ಎಂಬ ವಿಷಯ ಅಲ್ಲಿ ವಿಚಾರಣೆಯಲ್ಲಿದೆ.

Allegations have been levelled against the management *i. e.* against Sri R. R. Diwakar and his son Sri A.R. Diwakar. It is only in executive capacity that the Charity Commission can do it. The Charity Commission is not a completely judicial body ; it is a quasi-judicial body and as such it cannot take shelter under that pre'ext.

Sri D. DEVARAJ URS.—Sri Deve Gowda s ems to base his judgment on that the fact the Charity Commission is a quasiudicial body or and judicial body or a judibial body. It is a judicial body. I therefore thi k that it is for the Chair to decide whether it is sub-judice or not. He seems to take the line that Sri Diwakar or his son has mismanaged the whole affair and eaten the money and for that the person concerned should be sent to jail. It is certainiy not proper for the hon. Member to make such a remark now, especially when the whole matter is before the Charity Commission.

ಶ್ರೀ ಎಚ್. ಡಿ. ದೇವೇಗೌಡ.—ಇದರಲ್ಲಿ ಪರಿಶೀಲನೆ ಮಾಡಬೇಕಾದ ಮುಖ್ಯ ವಿಚಾರಗಳಲ್ಲಿ ಎರಡು ವಿಭಾಗಗಳಿವೆ. ಅವುಗಳಲ್ಲಿ ಒಂದು ಅಲ್ಲಿ ಇಲ್ಲಿಯವರೆಗೆ ಏನೇನು ಅಕ್ರಮಗಳು ನಡೆದಿವೆ ಎನ್ನುತಕ್ಕ ಬಗ್ಗೆ ಪತ್ರಿಕೆಗಳಲ್ಲಿ ಆ ಆಪಾದನೆಗಳ ಒಂದು ದೊಡ್ಡ ಪಟ್ಟಿಯನ್ನೇ ಪ್ರಕಟಣೆ ಮಾಡಲಾಗಿದೆ...

ಶ್ರೀ ಡಿ. ದೇವರಾಜ ಅರಸ್.—ಹಾಗೆ ಪ್ರಕಟಣೆ ಮಾಡಿರುವುದು ಸರಿ ಇರಬಹುದು, ಇಲ್ಲವೆ ತಪ್ಪಾಗಿದ್ದರೂ ಇರಬಹುದು. ಅದನ್ನೀಗ ಪರಿಶೀಲನೆ ಮಾಡುತ್ತಿದ್ದಾರೆ.

We do not know at this stage whether that is true or not. That is why we say it is sub-judice. That is a matter on which judical judgment has to be passed. Before that, the hon. Member comes to a conclusion that the man has done a wrong thing and he should be sent to jail.

Mr. DEPUTY SPEAKER.—The Assistant or the Deputy Charity Commissioner has the power to carry on enquiries and the powers are limited under the Act itself. Even then there are certain things on whieh the Assistant or the Deputy Charity Commissioner can pass his verdict. I would therefore urge upon the Hon. the Leader of the Opposition not to go into the merits.

Sri H. D. DEVE GOWDA.—I am entitled to say how the mismanagement has taken place. The charges regarding squandering of money are pending before the Charity Commission. Because I have got certain privileges as a legislator, I do not want to make any baseless charges I may make it clear that the charges are based on certain facts that are pending before the Charity Commission. Even the Charity Commission has failed to make enquiries into this mater. Who prevented them from doing so ? Now, the question before the court is whether Sri R. R. Diwakar is competent to remove the co-trustees.

Sri D. DEVRAJ URS.—Suppose a trustee, whoever he may be, thinks that things have gone bad and that mismanagement is there What has that trustee, who might have been there for a number of years, been doing all these years? Simply because Sri Diwakar removes a person, he finds fault with Sri Diwakar and wants to give publicity to all these matters. What has he been doing from the beginning, I want to know. The mismanagement might have been there since one year or since 10 years. All these years all these people have kept quiet. Sri Deve Gowda has got all this information from that one person who has been removed.

ಶ್ರೀ ಎಚ್. ಡಿ. ದೇವೇಗೌಡ.—ಕೋರ್ಟಿನವರು ನೇಮಕ ಮಾಡಿರತಕ್ಕ ಟ್ರಸ್ಟಿಗಳನ್ನು ತೆಗೆದು ಹಾಕುವುದಕ್ಕೆ ಇವರಿಗೆ ಹಕ್ಕಿದೆಯೇ, ಇಲ್ಲವೇ ಎಂಬುದನ್ನು ವಿಚಾರಣೆ ಮಾಡುತ್ತಿದ್ದಾರೆ. ಈ ಒಂದು ಸಾರ್ವಜನಿಕ ಸಂಸ್ಥೆಯು ಅಡಳಿತದಲ್ಲಿ ಅನೇಕ ಅಕ್ರಮಗಳು ಅಪರಾಧಗಳೂ ಆಗಿವೆ ಎಂಬುದಾಗಿ ನನಗೆ ನಿರ್ದಿಷ್ಟವಾಗಿ ತಿಳಿದು ಬಂದಿದೆ. ಹಾಗೊಂದು ವೇಳೆ ಕೋರ್ಟಿನಿಂದ ನೇಮಕ ವಾಗಿದ್ದ ಟ್ರಸ್ಟಿಗಳೂ ಕೂಡ ಈ ಅಕ್ರಮ ವ್ಯವಹಾರದಲ್ಲಿ ಪಾಲುಗಾರರಾಗಿದ್ದರೆ ಅವರನ್ನೂ ಕೂಡ ಸೆರೆಮನೆಗೆ ಕಳುಹಿಸುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲವೆಂದೂ ಅವರ ಬಗ್ಗೆಯೂ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಒತ್ತಾಯ ಮಾಡುತ್ತೇನೆ. ನನ್ನ ಉದ್ದೇಶ ಯಾರು ಹಿಂದೆ ಆ ಒಂದು ಸಾರ್ವಜನಿಕ ಸಂಸ್ಥೆಯನ್ನು ಕಟ್ಟಲು ಶ್ರಮಪಟ್ಟಿದ್ದಾರೋ ಅವರ ಶ್ರಮ ಸದುಪಯೋಗ ವಾಗಬೇಕು, ನಿರರ್ಥಕವಾಗಬಾರದು, ದುರುಪಯೋಗವಾಗಬಾರದು ಅನ್ನುವುದಕ್ಕಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ. ಇದರಲ್ಲಿ ಯಾರೊಬ್ಬರ ಕುಟಿಲತೆಗೂ ಅವಕಾಶವಿರಬಾರದು ದಿವಾಳಿ ತೆಗೆದು ಕೊಳ್ಳುವುದಕ್ಕೂ ಕೂಡ ಅವಕಾಶವಿಲ್ಲದಂತೆ ಮಾಡಿಕೊಳ್ಳಲು ಅಲ್ಲಿ 15 ಕುಂಚೆ ಜಮೀನು ಕೂಡ ಬಿದದಂತೆ ಶ್ರೀ ಪಾನ್ ಘೋರ್ಪಡೆಯವರಿಗೆ ಮಾರಾಟ ಮಾಡಿಕೊಂಡಿದ್ದಾರೆ. ಇದಕ್ಕೆ ಸರ್ಕಾರ ದವರು ಒಂದು ಸಮಿತಿಯನ್ನು ಮಾಡಿ ಆ ಆಪಾದನೆಗಳನ್ನೆಲ್ಲಾ ವಿಚಾರಣೆ ಮಾಡಬೇಕು. ನನಗೆ ಕೇಳಿಬರುತ್ತಿದೆ— ಈಗ ಹಾಕಿರತಕ್ಕ ಕೇಸುಗಳನ್ನು ವಾಪಸ್ ತೆಗೆದುಕೊಳ್ಳುವಂತೆ ಈ ಸರ್ಕಾರದ ಮೇಲೆ ಬಲವಾದ ಒತ್ತಡವನ್ನು ತಂದಿದ್ದಾರೆ ಎಂದು. ಇದಕ್ಕೆ ಖಂಡಿತ ಅವಕಾಶಕೊಡಬಾರ ದೆಂದು ಹೇಳುತ್ತೇನೆ.

ನಾನು ಕೇಳುವುದೇನೆಂದರೆ, ಆಕ್ಟ್ ಪ್ರಕಾರ ಇದು ಇದೆ, ಆದ್ದರಿಂದ ಸ್ಪೆಷಲ್ ಆಡಿಟ ಆಗಲೇಬೇಕು. ಯಾರ್ಯಾರೂ ಇದಕ್ಕೆ ಸಂಬಂಧಪಟ್ಟಿದ್ದಾರೋ ಅವರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡಬೇಕು. ಮತ್ತೊಂದು ವಿಷಯ. ಈಗ ಈ ಸಂಸ್ಥೆಯ ಭಾಗಂಶವನ್ನು ಬೇರೆಯವರ ಕೈಲಿ ಕೊಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಅದಕ್ಕೆ ಮೊಟಕು ಮಾಡಬೇಕು, ಈ ಸಂಸ್ಥೆಯನ್ನು ಯಾವ ಒಂದು ಉದ್ದೇಶದಿಂದ ಕಟ್ಟಿದ್ದಾರೋ ಅದನ್ನು ನೇರವೇರಿಸಿಕೊಂಡು ಹೋಗುವುದಕ್ಕೆ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು. 21 ಲಕ್ಷ ರೂಪಾಯಿಗಳು ನಮಗೆ ಬರಬೇಕಾಗಿದೆ. ಆದ್ದರಿಂದ ಈಗ ಇರತಕ್ಕ ಸ್ಟೇಯನ್ನು ವೆಕೇಟ್ ಮಾಡಿಸಿ ಅವರಿಂದ ಹಣವನ್ನು ಪಡೆಯುವುದಕ್ಕೆ ಪ್ರಯತ್ನಮಾಡಬೇಕು. ಎಲ್.ಐ.ಸಿ.ಗೆ ಪ್ರಾವಿಡೆಂಟ್ ಫಂಡಿಗೆ ಎಂಪ್ಲಾಯೀಸ್ ಕೊಟ್ಟಿರತಕ್ಕ ಹಣವನ್ನು ದುರುಪಯೋಗಮಾಡಿದ್ದಾರೆ. ಅವರು ಕೊಟ್ಟಿರತಕ್ಕ ಹಣ ಯಾವುದಕ್ಕೆ ಕೊಟ್ಟಿದ್ದಾರೋ ಅದೆಲ್ಲಾ ಸದುಪಯೋಗವಾಗಬೇಕು. ಅವು ಗಳನ್ನೆಲ್ಲಾ ನಾನು ಪ್ರಸ್ತಾಪ ಮಾಡಿದ್ದೇನೆ. ಅವುಗಳ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ವನ್ನು ತೆಗೆದುಕೊಳ್ಳಬೇಕು. ಚಾರಿಟಿ ಕಮಿಷನರ್ ನೋಟೀಸ್ ಬಗ್ಗೆ ಸೂಕ್ತ ಡೈರೆಕ್ಷನ್ ಕೊಡ ಬೇಕು. ಅತಿ ಶೀಘ್ರದಲ್ಲಿ ಅಲ್ಲಿಗೆ ಒಬ್ಬ ಅಡ್ಮಿನಿಸ್ಟ್ರೇಟರನ್ನು ನೇಮಕಮಾಡಿ, ಬೇರೆಯವರಿಗೆ ಅನ್ಯಾಯವಾಗಬಾರದೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರತಕ್ಕ ವಿಷಯ ವೇನೆಂದರೆ, ಬೊಂಬಾಯಿ ಪಬ್ಲಿಕ್ ಟ್ರಸ್ಟ್ ಆಕ್ಟ್‌ಗೆ ಸಂಬಂಧಪಟ್ಟಂತೆ ಅಲ್ಲಿನ ಕಾನೂನಿಗಳಿಗೆ ಒಳಪಟ್ಟು ನಡೆಯುತ್ತಿರುವ ವ್ಯವಹಾರ ಇದು. ಮಾನ್ಯ ಶ್ರೀ ದೇವೇಗೌಡರು ಹೇಳಿದ ಹಾಗೆ 1935ನೇ ಇಸವಿಯಲ್ಲಿ ಈ ಒಂದು ಸಂಸ್ಥೆ ಹುಟ್ಟಿ ಸಾರ್ವಜನಿಕವಾಗಿ ಬಹಳ ದೊಡ್ಡ ದೊಡ್ಡ ಕೆಲಸ ಗಳನ್ನು ಹಾಗೂ ಉಪಯೋಗಕರವಾದ ಕೆಲಸಗಳನ್ನು ಮಾಡಿದೆ. ಆ ವಿಷಯದಲ್ಲಿ ಭಿನ್ನಾಭಿಪ್ರಾ ಯವಿಲ್ಲ. ಈ ಕೆಲಸ ಮಾಡಿಕೊಂಡು ಬಂದಿರುವವರ ವಿಷಯದಲ್ಲಿ ಸರ್ಕಾರ ಎಷ್ಟರಮಟ್ಟಿಗೆ ಕೈಹಾಕಬಹುದೆಂಬುದು ಮುಖ್ಯ. ಮೊದಲು ಇದು ಸೋಲೆ ಟ್ರಸ್ಟ್ ಆಗಿತ್ತು. ನಂತರ ಕೋ

ಟ್ರಸ್ಟ್‌ನ್ನು ಅಪಾಯಿಂಟ್ ಮಾಡಿದರು. ಕೋ-ಟ್ರಸ್ಟಿ ಒಬ್ಬರು ಅಲ್ಲಿನ ವ್ಯವಹಾರ ನಡೆದಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಈ ಎಲ್ಲ ವಿಷಯಗಳ ಬಗ್ಗೆ ಚಾರಿಟಿ ಕಮಿಷನರ್ ಮುಂದೆ ವಿಚಾರಣೆಯಾಗುತ್ತಿದೆ. ಇದು ಸರಕಾರಕ್ಕೆ ಗೊತ್ತಾದ ಕೂಡಲೆ ಅಷ್ಟು ಬೇಗ ಇದನ್ನು ತೀರ್ಮಾನ ಮಾಡಬೇಕೆಂದು ತಿಳಿಸಬಹುದು. ಅದರಲ್ಲಿ ನೇರವಾಗಿ ಹೀಗೆಯೇ ಮಾಡಿ ಎಂದು ಅವರ ಮೇಲೆ ಪ್ರಭಾವ ಬೀರುವುದಕ್ಕೆ ಅವಕಾಶವಿಲ್ಲ, ಈಗಿರತಕ್ಕ ಕಾನೂನು ಪ್ರಕಾರ ಅವರು ಇನ್ನೂ ತೀರ್ಮಾನವನ್ನು ಕೈಗೊಳ್ಳಬೇಕಾಗಿದೆ. ಈ ಮಧ್ಯೆ ಈ ಆಕ್ಟ್ ಪ್ರಕಾರವಾಗಿ ಸರ್ಕಾರಕ್ಕೆ ವರಮಾನ ಬರುವುದಲ್ಲಿ ಸೇಕಡ 6ಷ್ಟು ಇನ್ನೂ ಅವರು ಕೊಡಬೇಕು. 1952ನೇ ಇಸವಿಯಿಂದ ಜುಲೈವರೆಗೆ ಬಂದಿದ್ದು ಮತ್ತು ಅದರ ಜೊತೆಗೆ 1972ನೇ ಇಸವಿ ಜೂನ್ 30ರವರೆಗೆ ಆಡಿಟ್ ಮಾಡಿ ಆಡಿಟೆಡ್ ಆಕೌಂಟ್ಸ್ ಪ್ರಕಾರ ನಮಗೆ ಇನ್ನೂ 22,11,697-50 ರೂಪಾಯಿಗಳಷ್ಟು ಬರಬೇಕೆಂದು ನಾವು ಅವರಿಗೆ ನೋಟೀಸ್ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಜಾಪ್ರಭುತ್ವ ಬಂದಮೇಲೆ ಇದು ಬರಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—31-1-1974ರಲ್ಲಿ ಇಷ್ಟು ದುಡ್ಡು ಬರಬೇಕೆಂದು ಚಾರಿಟಿ ಕಮಿಷನರ್ ಅವರು ನೋಟೀಸ್ ಕೊಟ್ಟಿದ್ದಾರೆ. ಮಾನ್ಯ ಶ್ರೀ ಆರ್. ಆರ್. ದಿವಾಕರ್ ಅವರು 12-2-1974ರಲ್ಲಿ ರಿಟ್ ಪಿಟಿಷನ್ ಕೊಟ್ಟರು. 13-2-1974ರಲ್ಲಯೇ ಒಂದು ನ್ಯೂ ಬಂತು. ಆಗ ನಮ್ಮ ಅಡ್ವೊಕೇಟ್ ಜನರಲ್ ಅವರು ಅಪಿಯರ್ ಆಗಿ ಚಾರಿಟಿ ಕಮಿಷನರ್ ಪರವಾಗಿ 27-2-1974ರಲ್ಲಿ ಒಂದು ಡ್ರಾಫ್ಟ್ ಸ್ಟೇಟ್‌ಮೆಂಟ್ ಆಫ್ ಅಬ್‌ಜಕ್ಷನ್ಸ್ ಹಾಕಿದ್ದಾರೆ. ಆದಿನ್ನೂ ತೀರ್ಮಾನವಾಗಿಲ್ಲ. ನ್ಯೂ ಇನ್ನೂ ವೆಕೇಟ್ ಸಹ ಆಗಿಲ್ಲ. ಮಾನ್ಯ ಶ್ರೀ ಫೂರ್ಪಡೆಯವರು ಅವನ್ನು ಕೊಂಡುಕೊಳ್ಳುವ ವಿಷಯವಾಗಲೀ ಅಥವಾ ಅವರು ಹೊಸದಾಗಿ ಗೊತ್ತಾಗಿರುವ ಟ್ರಸ್ಟಿಗಳ ಮೇಲೆ ಪ್ರಭಾವ ಬೀರುವುದಾಗಲಿ ಅಥವಾ ಚಾರಿಟಿ ಕಮಿಷನರ್ ಮೇಲೆ ಅವರು ಪ್ರಭಾವ ಬೀರುವುದಾಗಲೀ, ಸರ್ಕಾರದ ಗಮನಕ್ಕೆ ಬಂದಿಲ್ಲ. ಅದಮೇಲೆ ಈಗ ಚಾರಿಟಿ ಕಮಿಷನರ್ ಅವರ ಮೇಲೆ ಪ್ರಭಾವ ಬೀರಿ ಕೇನುಗಳನ್ನು ಪಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆಂದು ಹೇಳುವುದೂ ಸಹ ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಪಿಟಿಷನರ್ಸ್ ಹತ್ತಿರ ಯಾರು ಕೇನುಗಳನ್ನು ಪಾಪಸ್ಸು ತೆಗೆದುಕೊಳ್ಳಿ ಎಂಬುದಾಗಿ ಒತ್ತಡ ಹಾಕುತ್ತಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಒಂದು ತೀರ್ಮಾನ ತೆಗೆದುಕೊಳ್ಳಬೇಕೇ ಹೊರತು ಬೇರೆ ಯವರಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವೇ ಎಲ್ಲೋ ಪಿಟಿಷನರ್ ಮೇಲೆ ಒತ್ತಡ ಹಾಕುತ್ತಿದ್ದೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ನೇರವಾಗಿ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಲ್ಲ. ಕಾನೂನು ಪ್ರಕಾರವಾಗಿ ನಾವು ಎಷ್ಟು ದೂರ ಇದರಲ್ಲಿ ಕ್ಷೇಹಾಕಬೇಕೋ ಅಷ್ಟು ದೂರು ಕ್ಷೇಹಾಕಬಹುದು. ಇನ್ನುಳಿದ ಹೆಚ್ಚಿನ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಲ್ಲಿ ಏನು ನಡೆಯುತ್ತದೋ ಅದೇ ಒಂದು ತೀರ್ಮಾನ. ಚಾರಿಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಚಾರಿಟಿ ಕಮಿಷನರ್ ಬಹಳ ಜಾಗರೂಕತೆಯಿಂದ ನೋಡುತ್ತಾ ಇದ್ದು ಮುಂದಿನ ವ್ಯವಹಾರ ನಡೆಸುತ್ತಿದ್ದಾರೆ. ಅವಶ್ಯಕತೆ ಇದ್ದರೆ, ಇದರ ಬಗ್ಗೆ ಒಬ್ಬ ಅಡಿಷನಲ್ ಚಾರಿಟಿ ಕಮಿಷನರನ್ನು ಹಾಕಿ ತೀರ್ಮಾನಮಾಡುವ ಅವಕಾಶವೂ ಬರಬಹುದು. ಅಂತಹ ಅವಶ್ಯಕತೆ ಕಂಡುಬಂದರೆ, ಅದನ್ನೂ ಕೂಡ ಮಾಡಬೇಕಾಗುತ್ತದೆ. ಆಗ ಇದರ ತೀರ್ಮಾನ ಬೇಗ ಆಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಚಾರಿಟಿ ಕಮಿಷನರ ಮುಂದೆ ಈ ರೀತಿ ಅವ್ಯವಹಾರ ನಡೆದಿರುವ ದೂರು, ಹಣ ದುರುಪಯೋಗದ ಆಪಾದನೆ ಯಾವಾಗ ಹೋಗಿದೆ ? ಅಲ್ಲಿಗೆ ಅದು ಹೋದ ಮೇಲೆ ಸೆಕ್ಷನ್ 3 (3)-31ರ ಪ್ರಕಾರ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ಸ್ಪೆಷಲ್ ಆಡಿಟರ್ ಅವರನ್ನು ನೇಮಕಮಾಡಿದ್ದೀರಾ ? ಅವರೇನಾದರೂ ಚಾರಿಟಿ ಕಮಿಷನರ್ ಅವರ ಪ್ರಭಾವಕ್ಕೆ ಒಳಗಾಗಿ ಕೆಲಸಮಾಡುತ್ತಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ಸಂಬಂಧಪಟ್ಟ ಪೂರಾ ವಿವರ ಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಆಪಾದನೆ ಬಂದರೂ ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ ವೆಂದು ಹೇಳಿದ್ದೀರಿ.

ಶ್ರೀ ಎನ್. ಹುಚ್ಚಮಾಸಿಗೌಡ.—ಮಿಸ್‌ಮ್ಯಾನೇಜ್‌ಮೆಂಟ್ ವಗ್ಗೆರೆ, ಆಪಾದನೆ ಮಾಡಿದಂ ಥಾದ್ದು ಯಾವಾಗ ಎಂದು ಹೇಳುವುದಕ್ಕೆ ಆ ತಾರೀಖು ನನ್ನಲ್ಲಿಲ್ಲ. 1974ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ಈ ಆಪಾದನೆ ಮಾಡಿದ್ದಾರೆಂದು ಹೇಳಬಹುದು. If anybody has not looked into this matter, it is wrong. 1968ರಿಂದೀಚೆಗೆ ಚಾರಿಟಿ ಕಮಿಷನರ್ ಮುಂದೆ ವಿಚಾರಣೆ ಮಾಡಿರುವಾಗ ಯಾರೇ ತಪ್ಪುಮಾಡಿದರೂ ಅದು ತಪ್ಪಾಗುತ್ತದೆ. ಈಗ 1952ನೇ ಇಸವಿಯಿಂದ 1972ನೇ ಇಸವಿ ಜೂನ್ 30ರವರೆಗೆ 21-22 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತಿದ್ದಾರೆ. ಅಂದಮೇಲೆ ಹಿಂದಿನವರ ಮಾತು ಸರಿಯಿಲ್ಲವೆಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ನಾನು ನೋಡಿದ ಹಾಗೆ ಬೊಂಬಾಯಿ ಟ್ರಸ್ಟ್ ಆಕ್ಟ್‌ನಲ್ಲಿ ಅವರಿಗೆ ಎಗ್ಸೆಂಪ್ಷನ್ ಕೊಡುವ ಅಧಿಕಾರವಿತ್ತು. ನಾವು ಎಗ್ಸೆಂಪ್ಷನ್ ಕೊಡೋಣವೆಂದು ಮಿನಿಸ್ಟರ್ ಬರೆದಾಗ ಆ ಕಾರಣದಿಂದ ನುಮ್ಮನೆ ಇದ್ದಾರೆ. ಅದ್ದರಿಂದ ಈ ಸರ್ಕಾರವೂ ಅದನ್ನು ಕೇಳಲಿಲ್ಲ, ಬೇರೆಯವರು ಯಾರೂ ಕೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಕಾನೂನು ಪ್ರಕಾರ ಇದ್ದರೆ, ಕೊಡೋಣ.

Sri D. DEVARAJ URS.—It is only after we took over, it has come up before the House ಅದಕ್ಕೆ ಮುಂಚೆ 1952 ರಿಂದ ಕೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇದರ ವಿಚಾರ ಇರಲಿಲ್ಲವೆಂದು ಹೇಳುವುದಕ್ಕೆ, ನಿಮಗೆ ಇವನ್ನು ಕೊಡದೇ ಇರುವುದಕ್ಕೆ ಕಾರಣ ಅದನ್ನು 1952ರಿಂದ ನಿಮ್ಮ ಹಿಡಿತಕ್ಕೆ ಕೊಡಲಿಲ್ಲ. ವಿಷಯ ಈಗಹೊರಕ್ಕೆ ತಂದಿರುವುದರಿಂದ, ಇಷ್ಟು ವಿಚಾರ ಅದರ ಬಗ್ಗೆ ಬಂದಿದೆಯಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಯಾರೋ ಹೇಳಿದ್ದನ್ನು ಇಲ್ಲಿ ಹೇಳುತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರಕ್ಕೆ ಬರಬೇಕಾಗಿದ್ದ, ಹಿಂದೆ ವಸೂಲು ಮಾಡದೆ ಇದ್ದ 22 ಲಕ್ಷ ರೂಪಾಯಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಪತ್ತೆ ಹಚ್ಚಿ ಅದನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿರುವುದಕ್ಕೆ ಇಡೀ ದೇಶದ ಜನತೆಯ ಪರವಾಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಆದನ್ನು ಶ್ರೀಮಾನ್ ಘೋರ್ಪಡೆಯವರು ಕಬಳಿಸುವುದಕ್ಕೆ ಹೋದರೆ ಅದನ್ನು ತಡೆಗಟ್ಟಬೇಕು.

ಶ್ರೀ ಡಿ. ದೇವರಾಜ ಅರಸ್.—ನನ್ನ ತಿಳುವಳಿಕೆಯ ಪ್ರಕಾರ, ಕಾನೂನು ಪ್ರಕಾರ ಯಾರು ತೆಗೆದುಕೊಂಡರೂ ಯಾರು ಏನೂ ಮಾಡುವುದಕ್ಕಾಗುವುದಿಲ್ಲ. ಕಾನೂನು ಬಾಹಿರವಾಗಿ ತೆಗೆದು ಕೊಂಡರೆ ಸರಿಯಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ತೆಗೆದುಕೊಳ್ಳುವವರಿಗೆ ಕಾನೂನನ್ನು ಹೇಗೆ ಅವಾಯ್ಡ್ ಮಾಡಿಕೊಳ್ಳಬೇಕೆಂಬುದು ಗೊತ್ತು. ಕಾನೂನಿನ ಚೌಕಟ್ಟಿನಲ್ಲಿ ಹೇಗೆ ಕಬಳಿಸಬೇಕು ಎಂಬುದು ಗೊತ್ತಿದೆ. No disposal should be made before the Charity Commissioner gives a final dicision in the matter. Whether Mr. Ghorpade purchases or X or Y purchases, it is immeterial to me. The Government should not allow anybody to take even a piece of property which belongs to the Trust.

Sri D DEAVARAJ URS.—That stand I appreciate. Whether Mr. Ghorpade or X, Y or Z, it is none of our concern. It is not the Gevernments concern. I am sorry. The hon. Leader of the Opposition went on making cartain charges against the Minister. Alright, even as a Minister, if he is within the legal corners of the Act or the Rules, what we can do ? The trustee or the sole trustees is also empowered to do it. Therefore, if the Government has no power, then if Mr. Deve Gowda were to say or the whole House were to say, we cannot help it. 20 say X or Y is at it, it is certainly uncharitable. If so long as X or Y is within the bounds of law, nobody can help it.

Mr. DEPUTY SPEAKER.—It must be within the Rule. There is no scope for any discussion here.

ಶ್ರೀ ಎಚ್. ಡಿ. ದೇವೇಗೌಡ.—ಟ್ರಸ್ಟ್ ಪ್ರಾಪರ್ಟಿ ಪಬ್ಲಿಕ್ ಪ್ರಾಪರ್ಟಿ, ಅದನ್ನು ಕಾಯುತಕ್ಕದು ಸರ್ಕಾರದ ಕೆಲಸ.

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದ ಕಾನೂನಿನಲ್ಲಿ ಆ ಅಧಿಕಾರ ಕೊಟ್ಟಿದ್ದರೆ ಅದನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಟ್ರಸ್ಟ್ ಆಕ್ಟ್ ಪ್ರಕಾರ ಏನು ಅಧಿಕಾರ ಇದೆ ಅದನ್ನು ಮಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1974ನೇ ಇಸವಿ ಫೆಬ್ರವರಿ ತಿಂಗಳಿನಲ್ಲಿ ಪುತ್ತರಾಜ್ ಎನ್ನುವವರು ದೂರು ಕೊಟ್ಟು ಬೆಂಗಳೂರಿನಲ್ಲಿರತಕ್ಕ ಟ್ರಸ್ಟ್‌ಪ್ರಾಪರ್ಟಿ ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಅದು ಚಾರಿಟೀಸ್ ಕಮೀಷನರ ಗಮನಕ್ಕೆ ಬಂದಮೇಲೆ ಅದಕ್ಕೆ ಸಂಬಂಧ ಪಟ್ಟವರಿಗೆ ನೋಟೀಸ್ ಕೂಡ ಕೊಟ್ಟಿದ್ದೇವೆ. ಬೆಂಗಳೂರಿನಲ್ಲಿ ಶ್ರೀವಾಸ್ ವಿವಾಕರ್ ಅವರಿಗೆ ಇರತಕ್ಕ ಪ್ರಾಪರ್ಟಿ ಟ್ರಸ್ಟಿಗೆ ಸೇರಿಲ್ಲ, ಅದನ್ನು ಸೇರಿಸಬೇಕು ಎಂದು ಅವರಿಗೆ ನೋಟೀಸ್ ಕೂಡ ಕೊಟ್ಟಿದ್ದೇವೆ. ದೂರು ಕೊಟ್ಟಮೇಲೆ ಉಗ್ರಕ್ರಮತೆಗೆದುಕೊಂಡಿದ್ದೇವೆ. ಆ ಪ್ರಾಪರ್ಟಿ ಹೇಗೆ ಉಪಯೋಗವಾಗುತ್ತಿದೆ ಅದು ಟ್ರಸ್ಟಿಗೆ ಸೇರಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ, ಆದರೆ ನಾವು ಕಾನೂನು ಪ್ರಕಾರ ಕ್ರಮತೆಗೆದುಕೊಂಡಿದ್ದೇವೆ. ಕಾನೂನು ಪ್ರಕಾರ ಟ್ರಸ್ಟೀಸ್ ಏನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ನಾವು ತಪ್ಪಿಸುವುದಕ್ಕೆ ಆಗುವುದಿಲ್ಲ ಪಬ್ಲಿಕ್ ಟ್ರಸ್ಟೀಸ್ ಬಗ್ಗೆ ಆಕ್ಟ್ ಪ್ರಕಾರ ಸರ್ಕಾರ ನೇರವಾಗಿ ಏನು ಮಾಡುವುದಕ್ಕೆ ಅಧಿಕಾರ ಇದೆ ಅದನ್ನು ಮಾಡುತ್ತೇವೆ. ಅವರ ಮೇಲೆ ಕ್ರಮತೆಗೆದುಕೊಳ್ಳುವದಕ್ಕೆ ಕಾನೂನಿಗೆ ವಿರೋಧವಾದ ಸಂದರ್ಭದಲ್ಲಿ, ಚಾರಿಟಿ ಕಮೀಷನರು ಬೊಂಬಾಯಿ ಟ್ರಸ್ಟೀಸ್ ಆಕ್ಟ್ ಪ್ರಕಾರ ಕ್ರಮತೆಗೆದುಕೊಳ್ಳುವುದಕ್ಕೆ ಅಧಿಕಾರ ಇದ್ದರೆ ಎಲ್ಲಾ ಪೂರ್ಣವಾದ ಅಧಿಕಾರವನ್ನೂ ಉಪಯೋಗಿಸಿ ಅವರ ಮೇಲೆ ಕ್ರಮತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಟ್ರಸ್ಟೀಸ್ ಪ್ರಾಪರ್ಟಿಯನ್ನು ಇಪ್ಪೊತ್ತು ಯಾವುದೇ ಒಂದು ಪ್ರಭಾವಕ್ಕೆ ಒಳಗಾಗಿ ಮಾರಾಟ ಮಾಡುವುದಕ್ಕೆ ಬಿಡಕೂಡದು. ಟ್ರಸ್ಟ್ ಪ್ರಾಪರ್ಟಿಯನ್ನು ಕಾಯುವುದು ಸರ್ಕಾರಕ್ಕೆ ಸೇರಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಕಾನೂನು ಪ್ರಕಾರ ನಡೆಯಬೇಕಾಗುತ್ತದೆ. ಕಾನೂನು ಪ್ರಕಾರ ನಡೆಯುವ ಜವಾಬ್ದಾರಿ ಸರ್ಕಾರಕ್ಕೆ ಇದೆ.

Mr. DEPUTY SPEAKER.—The House stands adjourned to meet tomorrow at 8-30 A.M.

The House adjourned at Fifty Eight Minutes past one of the Clock to meet again at Thirty minutes past Eight of the Clock, on Saturday the 31st August 1974.